# ಬೆಂಗಳೂರಿನ ನಾಗರೀಕ ಸಂಘಟನೆಗಳ ಸತ್ಯಶೋಧನಾ ಸಮಿತಿ


fftblore@protonmail.com
9448474911 , 8951052007


**ಪತ್ರಿಕಾ ಪ್ರಕಟಣೆ**

**ಬೆಂಗಳೂರು, ಆಗಸ್ಟ್ 20, 2020.**

- ಡಿ.ಜೆ ಹಳ್ಳಿಯಲ್ಲಿ ನಡೆದ ಹಿಂಸೆ ಮತ್ತು ಅದರ ನಂತರ ನಡೆದ ಘಟನಾವಳಿಗಳ ಕುರಿತ ವಾಸ್ತವಾಂಶಗಳನ್ನು ಗ್ರಹಿಸುವುದಕ್ಕಾಗಿ ಬೆಂಗಳೂರಿನ ನಾಗರಿಕ ಸಂಘಟನೆಗಳು ಒಂದು ಸತ್ಯಶೋಧನೆ ನಡೆಸಲು ಮುಂದಾಗಿವೆ.
- ಹಲವು ನಾಗರೀಕ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ತಂಡವು ಡಿಜೆ ಹಳ್ಳಿಯ ಜನರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಮಾಡಲಿದೆ.
- ಡಿ.ಜೆ ಹಳ್ಳಿ ಘಟನೆಯ ಕುರಿತು ನಿರ್ದಿಷ್ಟ ಮಾಹಿತಿ ಹೊಂದಿದ್ದು ಅದನ್ನು ತಂಡದೊಂದಿಗೆ ಹಂಚಿಕೊಳ್ಳಲು ಬಯಸುವ ವ್ಯಕ್ತಿಗಳು ಸತ್ಯಶೋಧನಾ ತಂಡವನ್ನು ಸಂಪರ್ಕಿಸಲು ಮನವಿ

ಡಿ.ಜೆ ಹಳ್ಳಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಆಗಸ್ಟ್ 11ರ ರಾತ್ರಿ ನಡೆದ ಹಿಂಸೆ ಮತ್ತು ನಂತರದ ಘಟನಾವಳಿಗಳು ನಗರವನ್ನು ಪ್ರಕ್ಷುಬ್ಧಗೊಳಿಸಿವೆ. ಗಲಭೆಯ ಸಂದರ್ಭದಲ್ಲಿ ನಡೆದ ಗೋಲೀಬಾರಿನಲ್ಲಿ ಗುಂಡೇಟು ತಗುಲಿ 4 ಮಂದಿ ಸತ್ತಿದ್ದಾರೆ. ಹಲವರು ಘಾಯಗೊಂಡಿದ್ದಾರೆ. ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿ ಸಾಕಷ್ಟು ನಷ್ಟವಾಗಿದೆ.

ಆಗಸ್ಟ್ 11ರ ಘಟನೆಯ ನಂತರ ಹಲವು ಅಧಿಕೃತ ತನಿಖೆಗಳು ನಡೆಯುತ್ತಿರುವಾಗಲೂ, ವಿವಾದಿತ ಸಾಮಾಜಿಕ ಜಾಲತಾಣದ ಪೋಸ್ಟ್‌ನ ಹಿನ್ನೆಲೆ, ಅದಾದ ನಂತರ ಉಂಟಾದ ಹಿಂಸೆ ಮತ್ತು ಅಲ್ಲಿಂದೀಚೆಗೆ ಪೊಲೀಸರು ಕೈಗೊಂಡ ಕ್ರಮಗಳ ಕುರಿತಾದ ವಿವರಗಳಲ್ಲಿ ಸ್ಪಷ್ಟತೆಯಿಲ್ಲ. ಹಲವು ರಾಜಕೀಯ ಪಕ್ಷಗಳು ಘಟನೆಗೆ ಪರಸ್ಪರರನ್ನು ಹೊಣೆಗಾರರೆಂದು ಆರೋಪಿಸುತ್ತಾ ಕೆಸರೆರಚಾಟದಲ್ಲಿ ತೊಡಗಿವೆ. ಜೊತೆಗೆ ಅವರ ಕೆಲವು ಹೇಳಿಕೆಗಳಿಂದ ಸಮುದಾಯಗಳ ನಡುವೆ ಶತೃತ್ವ ಬೆಳೆಯುವಂತಾಗಿದೆ. ಮಾಧ್ಯಮಗಳ ಒಂದು ವಿಭಾಗವು ನಡೆಸುತ್ತಿರುವ ವಿಚಾರಣೆಯಿಂದಾಗಿ ಸನ್ನಿವೇಶ ಇನ್ನಷ್ಟು ಸೂಕ್ಷ್ಮಗೊಂಡಿದೆ.

ಡಿ.ಜೆ ಹಳ್ಳಿ ಮತ್ತು ಆಸುಪಾಸಿನ ಪ್ರದೇಶಗಳು ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲ ಸಮುದಾಯಗಳಿಂದ ತುಂಬಿದ್ದು, ಈ ಗಲಭೆಯ ನಂತರದ ಘಟನೆಗಳಿಂದ ಅಲ್ಲಿನ ಬಡಜನರು ಹಾನಿಗೊಳಗಾಗಿದ್ದಾರೆ. ಮಾಧ್ಯಮಗಳಲ್ಲಿ ಬಂದಿರುವ ವರದಿಗಳಿಂದ ತಿಳಿಯುವುದೇನೆಂದರೆ, ಹಲವರನ್ನು ಕಾನೂನು ಪ್ರಕ್ರಿಯೆಗಳನ್ನು ಮೀರಿಯೂ ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಗಲಭೆಯು ಬೆಂಗಳೂರಿಗೆ ಸಂಬಂಧಪಟ್ಟಿದ್ದು ಮಾತ್ರವಾಗಿ ಈಗ ಉಳಿದಿಲ್ಲ. ಈ ಘಟನೆ ಉಂಟುಮಾಡಿರುವ ಆತಂಕ ಮತ್ತು ಸನ್ನಿವೇಶದ ಗಂಭೀರತೆಯು ಇಡೀ ದೇಶದ ಗಮನವನ್ನು ಈ ಕಡೆಗೆ ಸೆಳೆದಿದೆ. ಆದ್ದರಿಂದ ಬೆಂಗಳೂರಿನ ಪ್ರಜ್ಞಾವಂತ ನಾಗರೀಕರು ಈ ವಿಷಯಕ್ಕೆ ಪ್ರತಿಕ್ರಿಯಿಸಲೇಬೇಕಾದ ಅನಿವಾರ್ಯತೆ ಉಂಟಾಗಿದೆ. ಒಟ್ಟಾರೆ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಹಿಂಸೆಯ ಸುತ್ತಲಿನ ಸತ್ಯಾಂಶಗಳನ್ನು ಅನ್ವೇಷಿಸಲೇಬೇಕಾಗಿದೆ. ಆದ್ದರಿಂದ, ಸಾಮಾಜಿಕ ಅಭಿವೃದ್ಧಿಯ ಕೆಲಸದಲ್ಲಿ ಹೆಸರು ಮಾಡಿರುವ ಹಲವರು ಪ್ರತಿನಿಧಿಗಳಾಗಿರುವ ಸತ್ಯಶೋಧನಾ ತಂಡವೊಂದು ರಚನೆಯಾಗಿದೆ. ಇದರಲ್ಲಿ ವಕೀಲರು, ಸಾಮಾಜಿಕ ಕಾರ್ಯಕರ್ತರು, ಸಂಶೋಧಕರು, ಕಾರ್ಮಿಕ ಸಂಘಟನೆಗಳ ಮುಖಂಡರು, ದಲಿತ ಮತ್ತು ಮಾನವ ಹಕ್ಕು ಸಂಘಟನೆಗಳ ನಾಯಕರು ಒಳಗೊಂಡಂತೆ ಅನೇಕ ಕಾಳಜಿಯುಳ್ಳ ನಾಗರೀಕರು ಪಾಲ್ಗೊಳ್ಳುತ್ತಿದ್ದಾರೆ. (ಸತ್ಯ ಶೋಧನಾ ತಂಡದ ಸದಸ್ಯರ ಪಟ್ಟಿ ಲಗತ್ತಿಸಲಾಗಿದೆ).

ಸಂವಿಧಾನದ ಆಶಯಗಳನ್ನು ಎಲ್ಲ ಜನಸಮುದಾಯಗಳಿಗೂ ಖಾತ್ರಿಪಡಿಸುವ ಮತ್ತು ಶಾಂತಿ–ಸೌಹಾರ್ದತೆಯನ್ನು ಪುನರ್ ಸ್ಥಾಪಿಸುವ ಉದ್ದೇಶಗಳೊಂದಿಗೆ ಈ ಪ್ರಯತ್ನವನ್ನು ಆರಂಭಿಸಲಾಗಿದೆ. ಸತ್ಯಶೋಧನಾ ತಂಡವು, ಗಲಭೆ ನಡೆದ ಪ್ರದೇಶಗಳ ಎಲ್ಲ ಸಮುದಾಯಗಳ ನಿವಾಸಿಗಳನ್ನು, ತೊಂದರೆಗೊಳಗಾದ ಕುಟುಂಬದ ಸದಸ್ಯರನ್ನು, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು, ಹಿಂಸೆಯ ಸಂದರ್ಭದಲ್ಲಿ ಗಾಯಗೊಂಡ ಮತ್ತು ಇತರ ಮಾಧ್ಯಮ ಪ್ರತಿನಿಧಿಗಳನ್ನು ಹಾಗೂ ಇನ್ನೂ ಹಲವರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಿದೆ. ಜೊತೆಗೆ, ದಿಕ್ಸೂಚಿ ಅಂಶಗಳನ್ನು ರೂಪಿಸಿಕೊಳ್ಳಲಾಗಿದ್ದು, ಅವುಗಳಿಗೆ ಬದ್ಧವಾಗಿದ್ದುಕೊಂಡು ಈ ಸತ್ಯಶೋಧನೆಯು ನಡೆಯಲಿದೆ.

ತಂಡವು, ತಮ್ಮ ಉದ್ದೇಶಗಳನ್ನು ತಲುಪುವುದಕ್ಕೆ ಬೆಂಗಳೂರಿನ ಎಲ್ಲ ನಾಗರೀಕರು, ನಾಗರೀಕ ಸಂಘಟನೆಗಳು, ಮಾಧ್ಯಮ ಮಿತ್ರರು ಮತ್ತು ಸಂಬಂಧಪಟ್ಟ ಎಲ್ಲರ ಸಹಕಾರವನ್ನು ಕೋರುತ್ತದೆ. ಈ ಘಟನೆಯ ಕುರಿತಂತೆ ಯಾವುದೇ ಮಾಹಿತಿಯನ್ನೂ ಹಂಚಿಕೊಳ್ಳಲು ಬಯಸುವವರು 8277288204 ಸಂಖ್ಯೆಗೆ ವಾಟ್ಸಾಪ್ ಮಾಡಬಹುದು. (ಫೋನ್ ಕರೆಯ ಬದಲು ವಾಟ್ಸಾಪ್ ಸಂದೇಶ ಕಳಿಸುವಂತೆ ಮನವಿ). ಘಟನೆಯ ಕುರಿತು ಸತ್ಯಶೋಧನಾ ತಂಡಕ್ಕೆ ಹೇಳಿಕೆ ನೀಡಬಯಸುವವರು ಈ ಕೆಳಗಿನ ಇ–ಮೇಲ್ ವಿಳಾಸಕ್ಕೆ ಹೇಳಿಕೆ ಕಳಿಸಬಹುದು.

ಹೆಚ್ಚಿನ ಮಾಹಿತಿಯನ್ನು ಮೇಲೆ ನೀಡಲಾದ ಸಂಖ್ಯೆಗಳಿಗೆ ಕರೆ ಮಾಡುವ ಮೂಲಕ ಪಡೆದುಕೊಳ್ಳಬಹುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

(ಸತ್ಯಶೋಧನಾ ತಂಡದ ಪರವಾಗಿ)

Scanned with CamScanner

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಂಸ್ಥೆ / ಹುದ್ದೆ |
| --- | --- | --- |
| 1 | ನೀನಾ ನಾಯಕ್ | ಮಾಜಿ ಅಧ್ಯಕ್ಷರು , ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹಾಗು ಮಾಜಿ ಸದಸ್ಯರು , ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ |
| 2 | ಸಿಂಥಿಯಾ ಸ್ಟೀಫೆನ್ | ಪತ್ರಕರ್ತರು ಹಾಗು ಪಾಲಿಸಿ ಸಂಶೋಧಕರು |
| 3 | ವಿ ನಾಗರಾಜ್ | ರಾಜ್ಯ ಸಂಚಾಲಕರು , ದಲಿತ ಸಂಘರ್ಷ ಸಮಿತಿ (ಸಂಯೋಜಕ) |
| 4 | ಆರ್ ಮೋಹನ್ ರಾಜ್ | ರಾಜ್ಯ ಸಂಚಾಲಕರು , ದಲಿತ ಸಂಘರ್ಷ ಸಮಿತಿ (ಭೀಮವಾದ) |
| 5 | ನಿಯಾಜ್ ಮೂಸ | ವಕೀಲರು , ಅಸೋಸಿಯೇಶನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ |
| 6 | ಲಿಯೋ ಸಾಲ್ಡಾನ | ಸಂಯೋಜಕರು, ಪರಿಸರ ಬೆಂಬಲ ತಂಡ (ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್) |
| 7 | ಗೀತಾ ಮೆನನ್ | ಸ್ತ್ರೀ ಜಾಗೃತಿ ಸಮಿತಿ |
| 8 | ಪ್ರೊಫೆಸರ್ ವೈ.ಜೆ.ರಾಜೇಂದ್ರ | ರಾಜ್ಯಾಧ್ಯಕ್ಷರು , ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ , ಕರ್ನಾಟಕ |
| 9 | ಇರ್ಷಾದ್ ಅಹ್ಮದ್ ದೇಸಾಯಿ | ಮೂವ್ಮೆಂಟ್ ಫಾರ್ ಜಸ್ಟೀಸ್ |
| 10 | ಮಧು ಭೂಷನ್ | ಗಮನ ಮಹಿಳಾ ಸಮೂಹ |
| 11 | ಕ್ಲಿಫ್ಟನ್ ಡಿ' ರೋಜಾರಿಯೋ | ವಕೀಲರು, ಆಲ್ ಇಂಡಿಯ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ |
| 12 | ಹೆಬ್ಬಾಳ್ ವೆಂಕಟೇಶ್ | ರಾಜ್ಯ ಸಂಚಾಲಕರು, ದಲಿತ ಸಂಘರ್ಷ ಸಮಿತಿ ಕರ್ನಾಟಕ |
| 13 | ಫ್ಲಿರ್ಡೋಸ್ ಖಾನ್ | ಕೌನ್ಸೆಲರ್ |
| 14 | ಗಾಂಧಿಮಥಿ ಕೆ | ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ |
| 15 | ತನ್ವೀರ್ ಅಹ್ಮದ್ | ಮೂವ್ಮೆಂಟ್ ಫಾರ್ ಜಸ್ಟೀಸ್ |
| 16 | ಶಣ್ಮುಗಂ ಪಿ | ಪೀಪಲ್ಸ್ ಡೆಮಾಕ್ರೆಟಿಕ್ ಫೋರಮ್ |
| 17 | ಸ್ವಾಥಿ ಶೇಷಾದ್ರಿ | ಆಲ್ ಇಂಡಿಯಾ ಪೀಪಲ್ಸ್ ಫೋರಮ್ |
| 18 | ಮಲ್ಲಿಗೆ | ಕರ್ನಾಟಕ ಜನಶಕ್ತಿ |
| 19 | ಆಲ್ವಿನ್ ಡಿಸೋಜಾ | ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಟ್ |
| 20 | ಡಾ. ಸಿದ್ದಾರ್ಥ್ ಜೋಷಿ | ಸಂಶೋಧಕರು |
| 21 | ಗಣೇಶ್ ಜಿ | ಪೀಪಲ್ಸ್ ಡೆಮಾಕ್ರೆಟಿಕ್ ಫೋರಮ್ |
| 22 | ಮನು ಚೌಧರಿ ಸಿ | ಗಮನ ಮಹಿಳಾ ಸಮೂಹ |
| 23 | ಶಿಲ್ಪಾ ಪ್ರಸಾದ್ | ವಕೀಲರು, ಆಲ್ ಇಂಡಿಯ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ |

Scanned with CamScanner